Reg. No. D. 221

# भारत का राजपत्र
# The Gazette of India
# ಭಾರತ ರಾಜ ಪತ್ರ

**(EXTRAORDINARY)**

ವಿಶೇಷ ಸಂಚಿಕೆ


**भाग IX** — **अनुभाग 1**
PART IX — SECTION 1
ಭಾಗ IX — ವಿಭಾಗ 1

**प्राधिकार से प्रकाशित**
Published by Authority
ಪ್ರಾಧಿಕಾರದ ಮೇರೆಗೆ ಪ್ರಕಟಿತವಾಗಿದೆ

| | | | |
|---|---|---|---|
| **सं–1** | **नई दिल्ली सोमवार, दिसम्बर 22, 1986** | **पुष्य 1, 1908 (शक)** | **खण्ड–6** |
| No. 1 | New Delhi Monday, December 22, 1986 | Pushya 1, 1908 (Saka) | Vol. 6 |
| ಸಂಖ್ಯೆ ೧ | ನವದೆಹಲಿ ಸೋಮವಾರ, ಡಿಸೆಂಬರ್ ೨೨, ೧೯೮೬ | ಪುಷ್ಯ ೧, ೧೯೦೮ (ಶಕ) | ಸಂಪುಟ ೬ |


## MINISTRY OF LAW AND JUSTICE

(Legislative Department)

New Delhi, October 30, 1986

The translations in Kannada of the following namely—(1) The All Idia Services Act, 1951 (2) The Muslim Personal Law (Shariat) Application Act, 1937 (3) The Identification of Prisoners Act, 1920 (4) The Government Saving Certificates Act, 1959 (5) The Indian Fisheries Act, 1897 (6) The Indian Christian Marriage Act, 1872 (7) The Census Act, 1948 (8) The Seamen's Provident Fund Act, 1966 (9) The Asian Development Bank Act, 1966 10) The Official Secrets Act, 1923.

ಕೆಳಕಂಡ ಅಧಿನಿಯಮಗಳು ಎಂದರೆ (೧) ಅಖಿಲ ಭಾರತ ಸೇವಾ ಅಧಿನಿಯಮ, ೧೯೫೧ (೨) ಮುಸ್ಲಿಮರ ವೈಯಕ್ತಿಕ ಕಾನೂನು (ಷರೀಯತ್) ಅನ್ವಯ ಅಧಿನಿಯಮ, ೧೯೩೭ (೩) ಬಂಧಿಗಳನ್ನು ಗುರ್ತಿಸುವ ಅಧಿನಿಯಮ, ೧೯೨೦ (೪) ಸರ್ಕಾರೀ ಉಳಿತಾಯ ಪ್ರಮಾಣ ಪತ್ರ ಅಧಿನಿಯಮ, ೧೯೫೯ (೫) ಭಾರತ ಮೀನುಗಾರಿಕೆ ಅಧಿನಿಯಮ, ೧೮೯೭ (೬) ಭಾರತೀಯ ಕ್ರೈಸ್ತರ ವಿವಾಹ ಅಧಿನಿಯಮ, ೧೮೭೨ (೭) ಜನಗಣತಿ ಅಧಿನಿಯಮ, ೧೯೪೮ (೮) ನಾವಿಕರ ಭವಿಷ್ಯ ನಿಧಿ ಅಧಿನಿಯಮ, ೧೯೬೬ (೯) ಏಷ್ಯಾ ಅಭಿವೃದ್ಧಿ ಬ್ಯಾಂಕ್ ಅಧಿನಿಯಮ, ೧೯೬೬ (೧೦) ಸರ್ಕಾರಿ ರಹಸ್ಯ ಅಧಿನಿಯಮ, ೧೯೨೩.

ಇವುಗಳ ಕನ್ನಡ ಭಾಷಾಂತರವನ್ನು ರಾಷ್ಟ್ರಪತಿಯವರ ಪ್ರಾಧಿಕಾರದ ಮೇರೆಗೆ ಪ್ರಕಟಿಸಲಾಗಿದೆ ಮತ್ತು ಅಧಿಕೃತ ಭಾಷಾಂತರಗಳ ಅಧಿನಿಯಮ, ೧೯೭೩ ರ (೧೯೭೩ ರ ೫೦) ೨ನೇ ಪ್ರಕರಣದ (ಕ) ಖಂಡದ ಮೇರೆಗೆ ಇವುಗಳನ್ನು ಈ ಅಧಿನಿಯಮಗಳ ಅಧಿಕೃತ ಕನ್ನಡ ಭಾಷಾಂತರವೆಂದು ಭಾವಿಸತಕ್ಕದ್ದು.

## ನಾವಿಕರ ಭವಿಷ್ಯ ನಿಧಿ ಅಧಿನಿಯಮ, 1966

**(1966ರ ಅಧಿನಿಯಮ ಸಂಖ್ಯೆ 4)**

**[26ನೇ ಮಾರ್ಚ್, 1966]**

ನಾವಿಕರ ಭವಿಷ್ಯ ನಿಧಿಯ ಸ್ಥಾಪನೆಗಾಗಿ ಉಪಬಂಧಿಸುವ ಅಧಿನಿಯಮ,

ಭಾರತ ಗಣರಾಜ್ಯದ ಹದಿನೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಕೆಳಕಂಡಂತೆ ಅಧಿನಿಯಮಿಸತಕ್ಕದ್ದು,–

**1. ಚಿಕ್ಕ ಹೆಸರು ಮತ್ತು ಅನ್ವಯ:–** (1) ಈ ಅಧಿನಿಯಮವನ್ನು ನಾವಿಕರ ಭವಿಷ್ಯ ನಿಧಿ ಅಧಿನಿಯಮ, 1966 ಎಂದು ಕರೆಯತಕ್ಕದ್ದು.

(2) ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ್ದ ಹೊರತು, ಈ ಅಧಿನಿಯಮದ ಉಪಬಂಧಗಳು ಪ್ರತಿಯೊಬ್ಬ ನಾವಿಕನಿಗೆ ಮತ್ತು ಅಂಥ ನಾವಿಕನ ನಿಯೋಜಕನಿಗೆ ಅನ್ವಯವಾಗತಕ್ಕದ್ದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ನಾವಿಕರ ತಂಡದೊಡನೆ ಮಾಡಿಕೊಂಡ ಒಪ್ಪಂದ" ಎಂದರೆ, ವ್ಯಾಪಾರಿ ಹಡಗು ಅಧಿನಿಯಮದ 100ನೇ ಪ್ರಕರಣ ಅಥವಾ ಸಂದರ್ಭಾನುಸಾರ, 114ನೇ ಪ್ರಕರಣದಲ್ಲಿ ಉಲ್ಲೇಖಿತವಾದ ಒಪ್ಪಂದ;

(ಬಿ) "ಮಂಡಲಿ" ಎಂದರೆ 5ನೇ ಪ್ರಕರಣದ ಮೇರೆಗೆ ರಚಿತವಾದ ನಾವಿಕರ ಭವಿಷ್ಯ ನಿಧಿ ನ್ಯಾಸಧಾರಿಗಳ ಮಂಡಲಿ;

(ಸಿ) "ಮುಂದುವರೆಯುತ್ತಿರುವ ವಿಮೋಚನಾ ಪ್ರಮಾಣ ಪತ್ರ" ಎಂದರೆ ವ್ಯಾಪಾರೀ ಹಡಗು ಅಧಿನಿಯಮದ 99ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಪ್ರಮಾಣ ಪತ್ರ;

(ಡಿ) "ವಂತಿಗೆ" ಎಂದರೆ ಪರಿಯೋಜನೆಯ ಮೇರೆಗೆ ಸದಸ್ಯನಿಗೆ ಸಂಬಂಧಿಸಿದಂತೆ ಸಂದಾಯವಾಗಬಹುದಾದ ವಂತಿಗೆ;

(ಇ) ನಾವಿಕನ ಸಂಬಂಧದಲ್ಲಿ "ನಿಯೋಜಕ" ಎಂದರೆ, ನಾವಿಕನನ್ನು ನಿಯೋಜನೆ ಮಾಡಿರುವ ಅಥವಾ ನೇಮಕ ಮಾಡಿರುವ ಹಡಗಿನ ಒಡೆಯ ಅಥವಾ ಅಂಥ ಒಡೆಯನ ಏಜೆಂಟ್ ಅಥವಾ ಹಡಗಿನ ಮಾಸ್ಟರ್;

(ಎಫ್) "ನಿಧಿ" ಎಂದರೆ ಪರಿಯೋಜನೆಯ ಮೇರೆಗೆ ಸ್ಥಾಪಿಸಲ್ಪಟ್ಟ ನಾವಿಕರ ಭವಿಷ್ಯ ನಿದಿ;

(ಜಿ) "ಸರ್ಕಾರ" ಎಂದರೆ ಕೇಂದ್ರ ಸರ್ಕಾರ;

(ಎಚ್) "ಮಾಸ್ಟರ್" ಮತ್ತು "ಹಡಗು" ಎಂಬುದು ವ್ಯಾಪಾರೀ ಹಡಗು ಅಧಿನಿಯಮದಲ್ಲಿ ಅವುಗಳಿಗೆ ಅನುಕ್ರಮವಾಗಿ ಕೊಟ್ಟಿರುವ ಅರ್ಥವನ್ನೇ ಹೊಂದಿರುತ್ತದೆ;

(ಐ) "ಸದಸ್ಯ" ಎಂದರೆ, ಮುಂದುವರೆಯುತ್ತಿರುವ ವಿಮೋಚನಾ ಪ್ರಮಾಣ ಪತ್ರವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಮತ್ತು ನಿಧಿಯ ಸದಸ್ಯನೆಂದು ಅಂಗೀಕೃತನಾಗಿರುವ ನಾವಿಕ;

(ಜೆ) "ವ್ಯಾಪಾರೀ ಹಡಗು ಅಧಿನಿಯಮ" ಎಂದರೆ, ವ್ಯಾಪಾರೀ ಹಡಗು ಸಾಗಣೆ ಅಧಿನಿಯಮ, 1958 (1958ರ 44).

(ಕೆ) "ಪರಿಯೋಜನೆ" ಎಂದರೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ರೂಪಿಸಲಾದ ನಾವಿಕರ ಭವಿಷ್ಯದ ನಿಧಿ ಪರಿಯೋಜನೆ;

(ಎಲ್) "ನಾವಿಕ" ಎಂದರೆ, ವ್ಯಾಪಾರೀ ಹಡಗು ಸಾಗಣೆ ಅಧಿನಿಯಮದ ಮೇರೆಗೆ ಒಂದು ಹಡಗಿನ ನಾವಿಕರ ತಂಡದ ಸದಸ್ಯನಾಗಿ ನಿಯೋಜಿತನಾಗುವ ಅಥವಾ ಕೆಲಸಕ್ಕೆ ನೇಮಕ ಮಾಡಲಾಗಿರುವ ವ್ಯಕ್ತಿ. [1][ಆದರೆ, ಕಲ್ಯಾಣಾಧಿಕಾರಿ, ದಾದಿ, ಸಂಗೀತಗಾರ, ಚಾಲಕ ಅಥವಾ ಹಡಗು ಅಟ್ಟದ ಕ್ಷೌರಿಕನನ್ನು ಒಳಗೊಳ್ಳುವುದಿಲ್ಲ.]

[1]. 1997 ರ 29 ನೇ ಅಧನಿಯಮದ ಮೂಲಕ ಪ್ರತ್ಯಾಯೋಜಿಸಲಾಗಿದೆ.

(ಎಮ್) “ಸೇವೆ” ಎಂದರೆ, ನಾವಿಕರ ತಂಡದೊಡನೆ ಮಾಡಿಕೊಂಡ ಒಪ್ಪಂದದ ಮೆಃಯೆಗೆ ನಾವಿಕನ ನಿಯೋಜನೆ ಅವಧಿ ಮತ್ತು ಅವನಿಗೆ ಮಜೂರಿಗಳನ್ನು ಸಂದಾಯ ಮಾಡಿದ ಅಥವಾ ಸಂದಾಯ ಮಾಡಬಹುದಾದ ಸಂಬಂಧದಲ್ಲಿನ ಯಾವುದೇ ಅವಧಿಯನ್ನು ಒಳಗೊಳ್ಳುತ್ತದೆ;

(ಎನ್) “ಮಜೂರಿಗಳು” ಎಂದರೆ, ನಾವಿಕರ ತಂಡದೊಡನೆ ಮಾಡಿಕೊಂಡ ಒಪ್ಪಂದದ ಮೇರೆಗೆ ನಾವಿಕನಿಗೆ ತತ್ಕಾಲದಲ್ಲಿ ಸಂದಾಯ ಮಾಡಬೇಕಾದ ಮೂಲ ಮಜೂರಿಗಳು ಮತ್ತು ಇದು,–

(i) ರಜಾದಿನಗಳ ಅಥವಾ ಯಾವುದೇ ರಜೆಯ ಅವಧಿಯ ಸಂಬಂಧದಲ್ಲಿ ಅವನು ಪಡೆಯಲು ಹಕ್ಕುಳ್ಳ ಯಾವುದೇ ಪರಿಶ್ರಮ ಧನ;

(ii) ಪಕ್ಷಕಾರರ ನಡುವಣ ಅಂಥ ಒಪ್ಪಂದ ಅಥವಾ ಇತರ ಯಾವುದೇ ಒಪ್ಪಂದಕ್ಕನುಸಾರವಾಗಿ ಅಂಥ ಮಜೂರಿಗಳು ಯಾವುದೇ ಹೆಚ್ಚಳವನ್ನು ಒಳಗೊಳ್ಳುತ್ತದೆ. ಆದರೆ ಅಧಿಕ ಕಾಲಿಕ ಭತ್ಯೆಗಳನ್ನು ಒಳಗೊಳ್ಳುವುದಿಲ್ಲ.

**3. ನಾವಿಕರ ಭವಿಷ್ಯ ನಿಧಿ ಪರಿಯೋಜನೆ:–** (1) ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಾವಿಕರಿಗೆ ಭವಿಷ್ಯ ನಿಧಿಯ ಸ್ಥಾಪನೆಗಾಗಿ, ನಾವಿಕರ ಭವಿಷ್ಯನಿಧಿ ಪರಿಯೋಜನೆಯೆಂದು ಕರೆಯಲಾಗುವ ಪರಿಯೋಜನೆಯನ್ನು ರೂಪಿಸಬಹುದು ಮತ್ತು ಪರಿಯೋಜನೆಯನ್ನು ರೂಪಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ಈ ಅಧಿನಿಯಮದ ಮತ್ತು ಆ ಪರಿಯೋಜನೆಯ ಉಪಬಂಧಗಳಿಗನುಸಾರವಾಗಿ ನಿಧಿಯನ್ನು ಸ್ಥಾಪಿಸತಕ್ಕದ್ದು.

(2) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಆ ಪರಿಯೋಜನೆಯು, ಈ ಅಧಿನಿಯಮ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಎಲ್ಲ ಅಥವಾ ಯಾವುದೇ ವಿಷಯಗಳ ಬಗ್ಗೆ ಉಪಬಂಧಿಸಬಹುದು.

(3) ಪರಿಯೋಜನೆಯು, ಈ ಸಂಬಂಧವಾಗಿ ಅದರ ಯಾವುದೇ ಉಪಬಂಧಗಳು ಪರಿಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು ಉತ್ತರಾನ್ವಯವಾಗಿ ಅಥವಾ ಪೂರ್ವಾನ್ವಯವಾಗಿ ಪರಿಣಾಮಕಾರಿಯಾಗತಕ್ಕದ್ದೆಂದು ಉಪಬಂಧಿಸಬಹುದು.

(4) ಪರಿಯೋಜನೆಯು, ಈ ಅಧಿನಿಯಮವನ್ನು ಹೊರತುಪಡಿಸಿ, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಅಥವಾ ಈ ಅಧಿನಿಯಮವನ್ನು ಹೊರತುಪಡಿಸಿ ಯಾವುದೆ ಕಾನೂನಿನ

ಕಾರಣದಿಂದಾಗಿ ಪರಿಣಾಮವುಳ್ಳ ಯಾವುದೇ ಲಿಖಿತದಲ್ಲಿ ಏನೇ ಅಡಕವಾಗಿದ್ದಾಗ್ಯೂ ಪರಿಣಾಮಕಾರಿಯಾಗಿರತಕ್ಕದ್ದು;

(5) ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಪರಿಯೋಜನೆಗೆ ಸೇರಿಸಬಹುದು, ತಿದ್ದುಪಡಿ ಮಾಡಬಹುದು, ಅದನ್ನು ವ್ಯತ್ಯಸ್ತಗೊಳಿಸಬಹುದು ಅಥವಾ ರದ್ದುಗೊಳಿಸಬಹುದು.

**4. ನಿಧಿ ಇತ್ಯಾದಿಗಳನ್ನು ನಿಹಿತಗೊಳಿಸಲು:–** (1) 3ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ನಿಧಿಯು 5ನೇ ಪ್ರಕರಣದ ಮೇರೆಗೆ ಸ್ಥಾಪಿತವಾದ ಮಂಡಲಿಯಲ್ಲಿ ನಿಹಿತಗೊಳ್ಳತಕ್ಕದ್ದು ಮತ್ತು ಮಂಡಲಿಯು ಅದರ ಆಡಳಿತ ನಡೆಸತಕ್ಕದ್ದು.

(2) ನಿಧಿಯಲ್ಲಿನ ಹಣವನ್ನು,–

(ಎ) ಮಂಡಲಿಯ ನೌಕರರ ವೇತನ ಮತ್ತು ಭತ್ಯೆಗಳನ್ನು ಹಾಗೂ ಮಂಡಲಿಯ ಇತರ ಆಡಳಿತ ವೆಚ್ಚಗಳನ್ನು ಪೂರೈಸಲು;

(ಬಿ) ಈ ಅಧಿನಿಯಮದ ಉದ್ದೇಶಗಳನ್ನು ಈಡೇರಿಸಲು

– ವಿನಿಯೋಗಿಸತಕ್ಕದ್ದು.

(3) ನಿಧಿಯ ಎಲ್ಲ ಹಣವನ್ನು ಅನುಮೋದಿತ [1]ಬ್ಯಾಂಕಿನಲ್ಲಿ ಠೇವಣಿ ಇಡತಕ್ಕದ್ದು ಅಥವಾ ಸರ್ಕಾರವು ಅನುಮೋದಿಸಬಹುದಾದ ಭದ್ರತಾ ಪತ್ರಗಳಲ್ಲಿ ತೊಡಗಿಸತಕ್ಕದ್ದು.

**[2]ವಿವರಣೆ.– ಈ ಪ್ರಕರಣದಲ್ಲಿ "ಅನುಮೋದಿತ ಬ್ಯಾಂಕ್" ಎಂದರೆ. ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955 ರ (1955 ರ 23) 3ನೆ ಪ್ರಕರಣದ ಅಡಿಯಲ್ಲಿ ಸ್ಥಾಪನೆಯಾದ ಭಾರತೀಯ ಸ್ಟೇಟ್ ಬ್ಯಾಂಕ್ ಅಥವಾ ಭಾರತೀಯ ಸ್ಟೇಟ್ ಬ್ಯಾಂಕ್ (ಸಹಾಯಕ ಬ್ಯಾಂಕುಗಳ) ಅಧಿನಿಯಮ, 1959**

---

1. 1997 ರ 29 ನೇ ಅಧನಿಯಮದ ಮೂಲಕ ಪ್ರತ್ಯಾಯೋಜಿಸಲಾಗಿದೆ.
2. 'ಅದೇ' ವಿವರಣೆಯನ್ನು ಸೇರಿಸಲಾಗಿದೆ.

**(1959 ರ 38) ರ 2 ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಲಾದ ಸಹಾಯಕ ಬ್ಯಾಂಕು, ಅಥವಾ ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಆರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1970(1970 ರ 5)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿಸಲಾದ ಸಂವಾದಿ ಹೊಸ ಬ್ಯಾಂಕು ಅಥವಾ ಬ್ಯಾಂಕಿಂಗ್ ಕಂಪನಿಗಳು (ಉದ್ಯಮಗಳ ಅರ್ಜನೆ ಮತ್ತು ವರ್ಗಾವಣೆ) ಅಧಿನಿಯಮ, 1980 (1980 ರ 40)ರ 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಹೊಸ ಸಂವಾದಿ ಬ್ಯಾಂಕು ಎಂದರ್ಥ.**

**5. ನ್ಯಾಸಧಾರಿಗಳ ಮಂಡಲಿಯ ರಚನೆ:–** (1) ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿ ಯಾಗುವಂತೆ ನಾವಿಕರ ಭವಿಷ್ಯ ನಿಧಿ ನ್ಯಾಸಧಾರಿಗಳ ಮಂಡಲಿಯೆಂದು ಕರೆಯಲಾಗುವ ಮಂಡಲಿಯನ್ನು ಸ್ಥಾಪಿಸತಕ್ಕದ್ದು. ಅದು ಶಾಶ್ವತ ಉತ್ತರಾಧಿಕಾರಿ ಮತ್ತು ಸಾಮಾನ್ಯ ಮುದ್ರೆಯನ್ನು ಹೊಂದಿರುವ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಆ ಹೆಸರಿನಲ್ಲಿ ಅದು ದಾವೆಯನ್ನು ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು.

(2) ಮಂಡಲಿಯ ಪ್ರಧಾನ ಕಛೇರಿಯು ಮುಂಬಯಿಯಲ್ಲಿ ಅಥವಾ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ನಿರ್ದಿಷ್ಟಪಡಿಸಬಹುದಾದಂಥ ಇತರ ಸ್ಥಳದಲ್ಲಿರತಕ್ಕದ್ದು.

(3) ಮಂಡಲಿಯು.–

(ಎ) ಸರ್ಕಾರದಿಂದ ನೇಮಿತನಾದ ಅಧ್ಯಕ್ಷ;

(ಬಿ) ಸರ್ಕಾರವು ತನ್ನ ಅಧಿಕಾರಿಗಳ ಪೈಕಿ, ನೇಮಕಮಾಡಿದ ಮೂವರಿಗೆ ಹೆಚ್ಚಿಲ್ಲದ ವ್ಯಕ್ತಿಗಳು;

(ಸಿ) ಈ ಸಂಬಂಧದಲ್ಲಿ ಸರ್ಕಾರದಿಂದ ಮನ್ನಣೆ ಪಡೆದಿರಬಹುದಾದಂಥ ಸಂಘ ಅಥವಾ ನಿಯೋಜಕರ ಸಂಘಗಳೊಡನೆ ಸಮಾಲೋಚಿಸಿದ ತರುವಾಯ ಸರ್ಕಾರವು ನೇಮಕ ಮಾಡಬೇಕಾದ ನಿಯೋಜಕರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳು;

**(ಡಿ) ಈ ಸಂಬಂಧದಲ್ಲಿ ಸರ್ಕಾರದಿಂದ ಮನ್ನಣೆ ಪಡೆದಿರಬಹುದಾದಂಥ ಸಂಘ ಅಥವಾ ನಾವಿಕರ ಸಂಘಗಳೊಡನೆ ಸಮಾಲೋಚಿಸಿದ ತರುವಾಯ ಸರ್ಕಾರವು ನೇಮಕ ಮಾಡಬೇಕಾದ ನಾವಿಕರನ್ನು ಪ್ರತಿನಿಧಿಸುವ ಮೂವರು ವ್ಯಕ್ತಿಗಳನ್ನು**

– ಒಳಗೊಂಡಿರತಕ್ಕದ್ದು.

(4) ಯಾವ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ಮಂಡಲಿಯ ಸದಸ್ಯನು ನೇಮಕವಾಗಬಹುದೋ ಆ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಕೋರಂ ಸೇರಿದಂತೆ ಮಂಡಲಿಯ ಸಭೆಗಳ ಕಾಲ, ಸ್ಥಳ ಮತ್ತು ಪ್ರಕ್ರಿಯೆಯು ಪರಿಯೋಜನೆಯಲ್ಲಿ ಉಪಬಂಧಿಸಬಹುದಾದಂತೆ ಇರತಕ್ಕದ್ದು.

(5) ಆ ಪರಿಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ, ಮಂಡಲಿಯು ತನ್ನಲ್ಲಿ ನಿಹಿತವಾಗಿರುವ ನಿಧಿಯ ನಿರ್ವಹಣೆಯನ್ನು ನಡೆಸತಕ್ಕದ್ದು.

(6) ಮಂಡಲಿಯು, ಪರಿಯೋಜನೆಯ ಯಾವುದೇ ಉಪಬಂಧದ ಮೂಲಕ ಅಥವಾ ಅದರ ಮೇರೆಗೆ ನೆರವೇರಿಸಲು ಅಗತ್ಯಪಡಿಸಿಬಹುದಾದಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**6. ಸಮಿತಿಗಳು:–** (1) ಮಂಡಲಿಯ ಯಾವುದೇ ಅಧಿಕಾರವನ್ನು ಚಲಾಯಿಸಲು ಅಥವಾ ಮಂಡಲಿಯ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ಅಥವಾ ಮಂಡಲಿಯು ಸಮಿತಿ ಅಥವಾ ಸಮಿತಿಗಳಿಗೆ ಒಪ್ಪಿಸಬಹುದಾದಂಥ ಯಾವುದೇ ವಿಷಯವನ್ನು ವಿಚಾರಣೆ ನಡೆಸಲು ಅಥವಾ ಅದರ ಮೇಲೆ ವರದಿ ಮಾಡಲು ಮತ್ತು ಸಲಹೆ ನೀಡಲು ಒಂದು ಅಥವಾ ಹೆಚ್ಚಿನ ಸಮಿತಿ ಅಥವಾ ಸಮಿತಿಗಳನ್ನು ಕಾಲಕಾಲಕ್ಕೆ ರಚಿಸಬಹುದು.

(2) ಸಮಿತಿಯು, ಮಂಡಲಿಯ ಸದಸ್ಯರಲ್ಲದ, ಆದರೆ ಅದರ ಸದಸ್ಯ ಬಲದ ಅರ್ಧವನ್ನು ಮೀರಿದಷ್ಟು ಸಂಖ್ಯೆಯ ವ್ಯಕ್ತಿಗಳನ್ನು ಒಳಗೊಂಡಿರಬಹುದು.

**7. ಮಂಡಲಿಯ ನೌಕರರ ನೇಮಕಾತಿ:–** (1) ಸರ್ಕಾರವು, ಮಂಡಲಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿರತಕ್ಕ ಒಬ್ಬ ನಾವಿಕರ ಭವಿಷ್ಯ ನಿಧಿ ಕಮಿಷನರನನ್ನು ನೇಮಿಸತಕ್ಕದ್ದು ಮತ್ತು ಅವನು ಮಂಡಲಿಯ ಸಾಮಾನ್ಯ ನಿಯಂತ್ರಣ ಮತ್ತು ಅಧೀಕ್ಷಣೆಗೆ ಒಳಪಟ್ಟಿರತಕ್ಕದ್ದು.

(2) ಸರ್ಕಾರವು, ನಾವಿಕರ ಭವಿಷ್ಯ ನಿಧಿ ಕಮಿಷನರನಿಗೆ ತನ್ನ ಕರ್ತವ್ಯಗಳನ್ನು [1]ನಿರ್ವಹಿಸುವಲ್ಲಿ ಸಹಾಯ ಮಾಡುವುದಕ್ಕಾಗಿ, ತಾನು ಅವಶ್ಯವೆಂದು ಪರಿಗಣಿಸುವಷ್ಟು, ಮಂದಿ ನಾವಿಕರ ಭವಿಷ್ಯ ನಿಧಿ ಡೆಪ್ಯುಟಿ ಕಮಿಷನರುಗಳನ್ನು ಸಹ ನೇಮಿಸಬಹುದು.

(3) ಮಂಡಲಿಯು, ಪರಿಯೋಜನೆಯ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಪರ್ಯಾಲೋಚಿಸಬಹುದಾದಂಥ ಇತರ ಅಧಿಕಾರಿಗಳನ್ನು ಮತ್ತು ನೌಕರರನ್ನು ನೇಮಿಸಬಹುದು.

(4) ಕೇಂದ್ರ ಲೋಕಸೇವಾ ಆಯೋಗದೊಡನೆ ಸಮಾಲೋಚನೆ ನಡೆಸಿದ ಹೊರತು, ನಾವಿಕರ ಭವಿಷ್ಯ ನಿಧಿ ಕಮಿಷನರ್ ಅಥವಾ ನಾವಿಕರ ಭವಿಷ್ಯದ ನಿಧಿ ಡೆಪ್ಯುಟಿ ಕಮಿಷನರ್ ಹುದ್ದೆಗೆ ಯಾವುದೇ ನೇಮಕಾತಿಯನ್ನು ಮಾಡತಕ್ಕುದಲ್ಲ;

ಪರಂತು, ಅಂಥ ಯಾವುದೇ ನೇಮಕಾತಿಯ ಸಂಬಂಧದಲ್ಲಿ,–

(ಎ) ಒಂದು ವರ್ಷಕ್ಕೆ ಮಿರದ ಅವಧಿಗಾಗಿ; ಅಥವಾ

(ಬಿ) ನೇಮಿಸಲಾಗುವ ವ್ಯಕ್ತಿಯು, ಅವನ ನೇಮಕಾತಿಯ ಕಾಲದಲ್ಲಿ,–

(i) ಭಾರತ ಆಡಳಿತ ಸೇವೆಯ ಸದಸ್ಯನಾಗಿದ್ದರೆ; ಅಥವಾ

(ii) ಸರ್ಕಾರಿ ಸೇವೆಯಲ್ಲಿ Iನೇ ದರ್ಜೆ ಅಥವಾ IIನೇ ದರ್ಜೆಯ ಹುದ್ದೆಯಲ್ಲಿದ್ದರೆ ಅಥವಾ ಮಂಡಲಿಯ ಸೇವೆಯಲ್ಲಿದ್ದರೆ,

– ಅಂಥ ಯಾವ ಸಮಾಲೋಚನೆಯೂ ಅವಶ್ಯಕವಾಗಿರತಕ್ಕುದಲ್ಲ.

[1] (ಬಿಟ್ಟು ಬಿಡಲಾಗಿದೆ)

(5) ನಾವಿಕರ ಭವಿಷ್ಯ ನಿಧಿ ಕಮಿಷನರನ ಮತ್ತು (2)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಅಧಿಕಾರಿಗಳ ನೌಕರಿ ಭರ್ತಿ ರೀತಿ, ಸಂಬಳ ಮತ್ತು ಭತ್ಯೆಗಳು, ಶಿಸ್ತು ಮತ್ತು ಸೇವೆಯ ಇತರ ಷರತ್ತುಗಳು, ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(6) ಮಂಡಲಿಯ ಇತರ ಅಧಿಕಾರಿಗಳ ಮತ್ತು ನೌಕರರ ನೌಕರಿ ಭರ್ತಿ ರೀತಿ, ಸಂಬಳ ಮತ್ತು ಭತ್ಯೆಗಳು ಶಿಸ್ತು ಮತ್ತು ಸೇವೆಯ ಇತರ ಷರತ್ತುಗಳು, ಸರ್ಕಾರದ ಅನುಮೋದನೆಯೊಂದಿಗೆ ಮಂಡಲಿಯ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿರತಕ್ಕದ್ದು.

(7) ಈ ಪ್ರಕರಣದ ಮೇರೆಗೆ ನೇಮಿತರಾದ ಎಲ್ಲ ವ್ಯಕ್ತಿಗಳು ಮಂಡಲಿಯ ನೌಕರರಾಗಿರತಕ್ಕದ್ದು.

**8. ವಂತಿಗೆಗಳು:–** (1) ಈ ಅಧಿನಿಯಮವು ಅನ್ವಯವಾಗುವ ಪ್ರತಿಯೊಬ್ಬ ನಿಯೋಜಕನು ಅವನಿಂದ ನಿಯೋಜಿಸಲಾದ (ಸದಸ್ಯನಾಗಿರುವ) ಪ್ರತಿಯೊಬ್ಬ ನಾವಿಕನಿಗೆ ಸಂಬಂಧಿಸಿ 1ನೇ ಜುಲೈ 1964ನೇ ದಿನದಿಂದ ಪ್ರಾರಂಭವಾಗಿ ಹಾಗೂ 31ನೇ ಮಾರ್ಚ್ 1968ನೆ ದಿನಕ್ಕೆ ಸಮಾಪ್ತವಾಗುವ [1]ಅವಧಿಗಾಗಿ ಶೇಕಡಾ ಆರರ ದರದಲ್ಲಿ, 1ನೇ ಏಪ್ರೀಲ್, 1968ನೇ ದಿನದಿಂದ ಪ್ರರಂಭವಾಗಿ ಹಾಗೂ 31 ನೇ ಡಿಸೆಂಬರ್, 1977 ನೇ ದಿನಕ್ಕೆ ಸಮಾಪ್ತವಾಗುವ ಅವಧಿಗಾಗಿ ಶೇಕಡಾ ಎಂಟ**ರ ದರದಲ್ಲಿ** ಮತ್ತು ಆ ತರುವಾಯ ಪ್ರತಿಯೊಬ್ಬ ನಾವಿಕನಿಗೆ ಸಂದಾಯ ಮಾಡಿದ ಅಥವಾ ಮಾಡಬೇಕಾದ ಮಜೂರಿಗಳ ಶೇಕಡಾ ಹತ್ತರ ದರದಲ್ಲಿ ಅಥವಾ ಪರಿಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾಂಥ ಹೆಚ್ಚಿನ ದರದಲ್ಲಿ ನಿಧಿಗೆ ವಂತಿಗೆ ನೀಡತಕ್ಕದ್ದು ಮತ್ತು ಅಂಥ ಪ್ರತಿಯೊಬ್ಬ ನಾವಿಕನೂ ನಿಯೋಜಕನು ತನಗೆ ಸಂದಾಯ ಮಾಡಬೇಕಾದ ವಂತಿಗೆಗೆ ಸಮನಾದ ಮೊಬಲಗನ್ನು ಸಹ ನಿಧಿಗೆ ಸಂದಾಯ ಮಾಡತಕ್ಕದ್ದು:

ಪರಂತು, ಮೇಲೆ ಹೇಳಿದ ವಂತಿಗೆ ಮೊಬಲಗನ್ನು ಪರಿಯೋಜನೆಯು ಪ್ರಾರಂಭವಾಗುವುದಕ್ಕೆ, ಮೊದಲಿನ ಅವಧಿಗೆ ಸಂಬಂಧಪಡುವಷ್ಟರ ಮಟ್ಟಿಗೆ ನಿಯೋಜನಕನು ಅಥವಾ ಸಂದರ್ಭಾನುಸಾರ, ನಾವಿಕನು, ಸರ್ಕಾರವು ಈ ಸಂಬಂಧದಲ್ಲಿ ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ

[1] ಪ್ರತ್ಯಾಯೋಜಿಸಲಾಗಿದೆ

ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಂದು (ಪರಿಯೋಜನೆಯು ಪ್ರಾರಂಭವಾದ ತರುವಾಯ ಅರವತ್ತು ದಿನಗಳಿಗಿಂತ ಮುಂಚಿತವಾಗಿಲ್ಲದ ದಿನಾಂಕವಾಗಿರುವ) ಸಂದಾಯ ಮಾಡತಕ್ಕದ್ದು.

(2) ನಿಯೋಜಕನು, ತಾನು ನಿಯೋಜಿಸಿಕೊಂಡಿರುವ (ಸದಸ್ಯನಾಗಿರುವ) ಪ್ರತಿಯೊಬ್ಬ ನಾವಿಕನಿಗೆ ಸಂಬಂಧಿಸಿ, ನಿಯೋಜನಕನ ವಂತಿಗೆ ಮತ್ತು ನೌಕರನ ವಂತಿಗೆ ಎರಡನ್ನೂ ಸಂದಾಯ ಮಾಡತಕ್ಕದ್ದು ಮತ್ತು ನೌಕರನ ವಂತಿಗೆಯನ್ನು ಅವನ ಮಜೂರಿಗಳಿಂದಲೇ ಮುರುಗಡೆ ಮಾಡಿ ನಾವಿಕನಿಂದ ವಸೂಲು ಮಾಡಲು ಹಕ್ಕುಳ್ಳವನಾಗಿರತಕ್ಕುದೇ ಹೊರತು ಅನ್ಯಥಾ ಅಲ್ಲ.

(3) ಪ್ರತಿಯೊಬ್ಬ ನಿಯೋಜಕನು ನಿಧಿಯ ನಿರ್ವಹಣಾ ವೆಚ್ಚಗಳಿಗಾಗಿ ಪರಿಯೋಜನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಹಣದ ಮೊತ್ತಗಳನ್ನು ಸಹ ಸಂದಾಯ ಮಾಡತಕ್ಕದ್ದು.

(4) (1)ನೇ ಉಪಪ್ರಕರಣದ ಮೇರೆಗೆ ಯಾವುದೇ ವಂತಿಗೆಯ ಮೊಬಲಗು ಅಥವಾ (3)ನೇ ಉಪಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಯಾವುದೇ ಮೊತ್ತವು ಒಂದು ರೂಪಾಯಿಯ ಭಾಗವನ್ನು ಒಳಗೊಂಡಿರುವಲ್ಲಿ, ಅಂಥ ಭಾಗವು ಐವತ್ತು ಪೈಸೆ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ ಆಗ ಅದನ್ನು ಪೂರ್ಣವಾಗಿ ಒಂದು ರೂಪಾಯಿಗೆ ಹೆಚ್ಚಿಸತಕ್ಕದ್ದು ಮತ್ತು ಅಂಥ ಭಾಗವು ಐವತ್ತು ಪೈಸೆಗಿಂತ ಕಡಿಮೆಯಾಗಿದ್ದರೆ ಅದನ್ನು ಕಡೆಗಣಿಸತಕ್ಕದ್ದು.

**9. ನಿಯೋಜಕರಿಂದ ಬಾಕಿ ಇರುವ ಹಣದ ಬಗ್ಗೆ ನಿರ್ಧಾರ:–** (1) ನಾವಿಕರ ಭವಿಷ್ಯ ನಿಧಿ ಕಮಿಷನರ್ ಅಥವಾ ನಾವಿಕರ ಭವಿಷ್ಯನಿಧಿಯ ಯಾರೇ ಡೆಪ್ಯುಟಿ ಕಮಿಷನರನು ಆದೇಶದ ಮೂಲಕ ಈ ಅಧಿನಿಯಮ ಅಥವಾ ಪರಿಯೋಜನೆಯ ಯಾವುದೇ ಉಪಬಂಧದ ಮೇರೆಗೆ ಯಾವುನೇ ನಿಯೋಜಕನಿಂದ ಬಾಕಿ ಇರುವ ಮೊಬಲಗನ್ನು ನಿರ್ಧರಿಸಬಹುದು ಮತ್ತು ಈ ಉದ್ದೇಶಕ್ಕಗಿ ತಾನು ಅವಶ್ಯವೆಂದು ಭಾವಿಸಬಹುದಾದ ವಿಚಾರಣೆಯನ್ನು ನಡೆಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ವಿಚಾರಣೆಯನ್ನು ನಡೆಸುವ ಅಧಿಕಾರಿಯು ಅಂಥ ವಿಚಾರಣೆ ಉದ್ದೇಶಗಳಿಗಾಗಿ, ಸಿವಿಲ್ ಪ್ರಕ್ರಿಯಾ ಸಂಹಿತೆ 1908 (1908ರ 5) ಮೇರೆಗೆ ದಾವೆಯ ವಿಚಾರಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ನಿಹಿತವಾಗಿರುದಂಥವೇ ಅಧಿಕಾರಗಳನ್ನು ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದಂತೆ ಹೊಂದಿರತಕ್ಕದ್ದು, ಅಂದರೆ,–

(ಎ) ಯಾರೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಪಡಿಸುವುದು ಅಥವಾ ಅವನಿಗೆ ಪ್ರಮಾಣ ಮಾಡಿಸಿ ಪರೀಕ್ಷಿಸುವುದು;

(ಬಿ) ದಸ್ತಾವೇಜುಗಳನ್ನು ಬಹಿರಂಗಪಡಿಸುವುದನ್ನು ಮತ್ತು ಅವುಗಳನ್ನು ಹಾಜರು ಪಡಿಸುವುದನ್ನು ಅಗತ್ಯಪಡಿಸುವುದು;

(ಸಿ) ಶಪಥ ಪತ್ರಗಳ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಸಾಕ್ಷಿದಾರರ ವಿಚಾರಣೆಗಾಗಿ ಕಮಿಷನ್ನು ಹೊರಡಿಸುವುದು;

ಮತ್ತು ಅಂಥ ಯಾವುದೇ ವಿಚಾರಣೆಯನ್ನು ಭಾರತ ದಂಡ ಸಂಹಿತೆ (1860ರ 45)ಯ 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯೊಳಗೆ, ಮತ್ತು 196ನೇ ಪ್ರಕರಣದ ಉದ್ದೇಶಕ್ಕಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು.

(3) ನಿಯೋಜಕನಿಗೆ, ತನ್ನ ಪ್ರಕರಣವನ್ನು ನಿರೂಪಿಸಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ಹೊರತು ಈ ಪ್ರಕರಣದ ಮೇರೆಗೆ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

(4) ಈ ಪ್ರಕರಣದ ಮೇರೆಗೆ ಮಾಡಿದ ಆದೇಶವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕುದಲ್ಲ.

**10. ನಿಯೋಜಕರಿಂದ ಬಾಕಿ ಇರುವ ಹಣವನ್ನು ವಸೂಲು ಮಾಡುವ ವಿಧಾನ:–** ನಿಧಿಗೆ ಸಂದಾಯವಾಗಬೇಕಾದ ಯಾವುದೇ ವಂತಿಗೆಗೆ ಸಂಬಂಧಿಸಿ ನಿಯೋಜಕನಿಂದ ಬಾಕಿ ಇರುವ ಯಾವುದೇ ಮೊಬಲಗು ಅಥವಾ 18ನೇ ಪ್ರಕರಣದ ಮೇರೆಗೆ ವಸೂಲಾಗಬೇಕಾದ ಯಾವುದೇ ಹಾನಿ ಪರಿಹಾರಗಳು ಅಥವಾ ಈ ಅಧಿನಿಯಮದ ಯಾವುದೇ ಇತರ ಉಪಬಂಧದ ಮೇರೆಗೆ ಅಥವಾ ಪರಿಯೋಜನೆಯ ಯಾವುದೇ ಉಪಬಂಧದ ಮೇರೆಗೆ ಅವನಿಂದ ಸಂದಾಯವಾಗಬೇಕಾದ ಯಾವುದೇ ಚಾರ್ಜುಗಳ ಮೊಬಲಗು ಬಾಕಿ ಇದ್ದರೆ, ಭೂಕಂದಾಯ ಬಾಕಿಯನ್ನು ವಸೂಲು ಮಾಡುವ ರೀತಿಯಲ್ಲಿಯೇ ಸರ್ಕಾರವು ಅದನ್ನು ವಸೂಲು ಮಾಡಬಹುದು.

**11. 1961ರ 43ನೇ ಅಧಿನಿಯಮದ ಮೇರೆಗೆ ನಿಧಿಯನ್ನು ಮನ್ನಣೆ ಪಡೆದ ಭವಿಷ್ಯ ನಿಧಿಯೆಂದು ಭಾವಿಸತಕ್ಕದ್ದು:–** ಆದಾಯ ತೆರಿಗೆ ಅಧಿನಿಯಮದ 1961ರ ಉದ್ದೇಶಗಳಿಗಾಗಿ, ನಿಧಿಯನ್ನು ಆ ಅಧಿನಿಯಮದ ಅರ್ಥವ್ಯಾಪ್ತಿಯೊಳಗೆ ಮನ್ನಣೆ ಪಡೆದ ಭವಿಷ್ಯ ನಿಧಿಯೆಂದು ಭಾವಿಸತಕ್ಕದ್ದು.

**12. ಜಪ್ತಿಯ ವಿರುದ್ಧ ಸಂರಕ್ಷಣೆ:–** (1) ನಿಧಿಯಲ್ಲಿ ಯಾರೇ ಸದಸ್ಯನ ಜಮೆಯಲ್ಲಿ ಇರುವ ಮೊಬಲಗನ್ನು ಯಾವುದೇ ರೀತಿಯಲ್ಲಿ ಹಸ್ತಾಂತರಿಸಲು ಅಥವಾ ಚಾರ್ಜು ಮಾಡಲು ಸಮರ್ಥವಾಗಿರತಕ್ಕುದಲ್ಲ ಮತ್ತು ಸದಸ್ಯನು ಮಾಡಿದ ಯಾವುದೇ ಸಾಲ ಅಥವಾ ಹೊಣೆಗೆ ಸಂಬಂಧಿಸಿ, ಯಾವುದೇ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶದ ಮೇರೆಗೆ ಜಪ್ತಿಗೆ ಗುರಿಯಾಗತಕ್ಕುದಲ್ಲ ಮತ್ತು ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಅಧಿನಿಯಮ, 1909 (1909ರ 3)ರ ಮೇರೆಗೆ ನೇಮಕಗೊಂಡ ದಿವಾಳಿ ಆಸ್ತಿಯ ಅಧಿಕಾರಿ, ಪ್ರಾಂತೀಯ ದಿವಾಳಿ ಅಧಿನಿಯಮ, 1920 (1920ರ 5)ರ ಮೇರೆಗೆ ನೇಮಕಗೊಂಡ ಯಾವುನೇ ರಿಸಿವರನ್ನು ಅಂಥ ಯಾವುದೇ ಮೊಬಲಗಿಗೆ ಹಕ್ಕುಳ್ಳವನಾಗಿರತಕ್ಕುದಲ್ಲ ಅಥವಾ ಅದರ ಮೇಲೆ ಯಾವುದೇ ಕ್ಲೇಮು ಹೊಂದಿರತಕ್ಕುದಲ್ಲ.

(2) ಯಾರೇ ಸದಸ್ಯನು ಮರಣ ಕಾಲದಲ್ಲಿ ನಿಧಿಯಲ್ಲಿ ಅವನ ಜಮೆಯಲ್ಲಿರುವ ಮತ್ತು ಪರಿಯೋಜನೆಯ ಮೇರೆಗೆ ಅವನ ನಾಮನಿರ್ದೇಶಿತನಿಗೆ ಸಂದಾಯವಾಗಬೇಕಾದ ಯಾವುದೇ ಮೊಬಲಗು, ಪರಿಯೋಜನೆಯ ಅಧಿಕೃತಗೊಳಿಸಿದ ಯಾವುದೇ ಕಳೆತಕ್ಕೆ ಒಳಪಟ್ಟು ನಾಮನಿರ್ದೇಶಿತನಲ್ಲಿ ನಿಹಿತವಾಗತಕ್ಕದ್ದು ಮತ್ತು ಸದಸ್ಯನ ಮರಣಕ್ಕೆ ಮುಂಚೆ ಮೃತನು ಅಥವಾ ನಾಮನಿರ್ದೇಶಿತನು ಮಾಡಿದ ಯಾವುದೇ ಅಥವಾ ಇತರ ಹೊಣೆಗಳಿಂದ ಮುಕ್ತವಾಗಿರತಕ್ಕದ್ದು.

**13. ಇತರ ಸಾಲಗಳಿಗಿಂತಲೂ ವಂತಿಗೆಗಳ ಸಂದಾಯಕ್ಕೆ ಆದ್ಯತೆ:–** ಯಾರೇ ನಿಯೋಜಕನೇ ಆಗಲಿ ದಿವಾಳಿಯೆಂದು ನ್ಯಾಯ ನಿರ್ಣೀತನಾದಾಗ ಅಥವಾ ಕಂಪನಿಯಾಗಿರುವಲ್ಲಿ ಪರಿಸಮಾಪನೆಗಾಗಿ ಆದೇಶವನ್ನು ಮಾಡಲಾಗಿರುವಾಗ, ನಿಧಿಗೆ ಸಂದಾಯವಾಗಬೇಕಾದ ಯಾವುದೇ ವಂತಿಗೆಗೆ ಸಂಬಂಧಿಸಿ ನಿಯೋಜಕನಿಂದ ಬಾಕಿ ಇರುವ ಮೊಬಲಗು, 18ನೇ ಪ್ರಕರಣದ ಮೇರೆಗೆ ವಸೂಲಾಗಬೇಕಾಗಿರುವ ಹಾನಿ ಪರಿಹಾರಗಳನ್ನು ಅಥವಾ ಈ ಅಧಿನಿಯಮದ ಇತರ ಯಾವುದೇ ಉಪಬಂಧದ ಮೇರೆಗೆ ಅಥವಾ ಪರಿಯೋಜನೆಯ ಯಾವುದೇ ಉಪಬಂಧದ ಮೇರೆಗೆ ಅವನಿಂದ ಸಂದಾಯವಾಗಬೇಕಾದ ಯಾವುದೇ ಚಾರ್ಜುಗಳನ್ನು, ನ್ಯಾಯನಿರ್ಣಯದ ಅಥವಾ ಪರಿಸಮಾಪನೆಯ ಅದೇಶವನ್ನು ಮಾಡುವುದಕ್ಕೆ ಮುಂಚೆ

ಹೊಣೆಯ ಪ್ರಾಪ್ತವಾಗಿರುವಲ್ಲಿ ಪ್ರೆಸಿಡೆನ್ಸಿ ಪಟ್ಟಣ ದಿವಾಳಿ ಅಧಿನಿಯಮ, 1909 (1909ರ 3)ರ 49ನೇ ಪ್ರಕರಣದ ಮೇರೆಗೆ, ಅಥವಾ ಪ್ರಾಂತೀಯ ದಿವಾಳಿ ಅಧಿನಿಯಮ, 1920 (1920ರ 5)ರ 61ನೇ ಪ್ರಕರಣದ ಮೇರೆಗೆ, ಅಥವಾ ಕಂಪನಿಗಳ ಅಧಿನಿಯಮ, 1956 (1956ರ 1)ರ 530ನೇ ಪ್ರಕರಣದ ಮೇರೆಗೆ, ಯಾರ ಸಾಲಗಳಲ್ಲಿ ಸಂದರ್ಭಾನುಸಾರ ದಿವಾಳಿ ಸ್ವತ್ತಿನ ಅಥವಾ ಸಂದರ್ಭಾನುಸಾರ ಪರಿಸಮಾಪನೆಯಾಗುತ್ತಿರುವ ಕಂಪನಿ ಆಸ್ತಿಗಳ ಹಂಚಿಕೆಯಲ್ಲಿ ಎಲ್ಲ ಇತರ ಸಾಲಗಳಿಗಿಂತಲೂ ಆದ್ಯತೆ ಪಡೆದು ಸಂದಾಯವಾಗಬೇಕಾದಂಥ ಆ ಸಾಲಗಳಲ್ಲಿ ಸೇರಿಸಲಾಗಿದೆಯೆಂದು ಭಾವಿಸತಕ್ಕದ್ದು.

**14. ನಿಯೋಜಕನು ಮಜೂರಿಗಳನ್ನು ಕಡಿಮೆ ಮಾಡತಕ್ಕುದಲ್ಲ:–** ಯಾವ ನಿಯೋಜಕನೇ ಆಗಲಿ, ನಿಧಿಗೆ ಯಾವುದೇ ವಂತಿಗೆ ಅಥವಾ ಈ ಅಧಿನಿಯಮದ ಅಥವಾ ಪರಿಯೋಜನೆಯ ಮೇರೆಗೆ ಯಾವುದೇ ಚಾರ್ಜುಗಳನ್ನು ಸಂದಾಯಮಾಡತಕ್ಕ ತನ್ನ ಹೊಣೆಗಾರಿಕೆಯ ಕಾರಣ ಮಾತ್ರದಿಂದಲೇ, ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪರಿಯೋಜನೆಯು ಅನ್ವಯಿಸತಕ್ಕ ಯಾವುದೇ ನಾವಿಕನ ಮಜೂರಿಗಳನ್ನು ಅಥವಾ ನಾವಿಕ ತಂಡದೊಡನೆ ಮಾಡಿಕೊಂಡ ಒಪ್ಪಂದದ ಮೇರೆಗೆ ಅಥವಾ ಪಕ್ಷಕಾರರ ನಡುವಣ ಇತರ ಯಾವುದೇ ಒಪ್ಪಂದದ ಮೇರೆಗೆ ನಾವಿಕನು ಹಕ್ಕುದಾರನಾಗಿರುವ ವೃದ್ಧಾಪ್ಯ ವೇತನ, ಉಪದಾನ ಅಥವಾ ಭವಿಷ್ಯ ನಿಧಿಯ ಸ್ವರೂಪದಲ್ಲಿನ ಪ್ರಯೋಜನಗಳ ಒಟ್ಟು ಪರಿಣಾಮವನ್ನು ಕಡಿಮೆ ಮಾಡತಕ್ಕುದಲ್ಲ.

**15. ಪರಿಶೀಲಕರು:–** (1) ಈ ಅಧಿನಿಯಮದ ಮತ್ತು ಪರಿಯೋಜನೆಯ ಉದ್ದೇಶಗಳಿಗಾಗಿ, ಸರ್ಕಾರವು ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ತಾನು ಯುಕ್ತವೆಂದು ಭಾವಿಸುವಂಥ ಮಂಡಳಿಯ ನೌಕರರನ್ನು ಪರಿಶೀಲಕರನ್ನಾಗಿ ನೇಮಿಸಬಹುದು ಮತ್ತು ಅವರ ಅಧಿಕಾರ ವ್ಯಾಪ್ತಿಯನ್ನು ನಿರ್ಧರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪರಿಶೀಲಕನು ಈ ಅಧಿನಿಯಮದ ಅಥವಾ ಪರಿಯೋಜನೆಯ ಸಂಬಂಧದಲ್ಲಿ ಒದಗಿಸಲಾದ ಯಾವುದೇ ಮಾಹಿತಿ ಸರಿತನವನ್ನು ವಿಚಾರಿಸುವ ಉದ್ದೇಶಕ್ಕಾಗಿ ಅಥವಾ ಈ ಅಧಿನಿಯಮದ ಅಥವಾ ಪರಿಯೋಜನೆಯ ಯಾವುದೇ ಉಪಬಂಧಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಕೊಳ್ಳುವ ಉದ್ದೇಶಕ್ಕಾಗಿ.–

(ಎ) ಪರಿಯೋಜನೆಯ ಸಂಬಂಧದಲ್ಲಿ ತಾನು ಅವಶ್ಯವೆಂದು ಪರಿಗಣಿಸಬಹುದಾದಂಥ ಮಾಹಿತಿಯನ್ನು ಒದಗಿಸಲು ನಿಯೋಜಕನನ್ನು ಅಗತ್ಯಪಡಿಸಬಹುದು;

(ಬಿ) ಯಾವುದೇ ಯುಕ್ತ ಕಾಲದಲ್ಲಿ ಮತ್ತು ತಾನು ಯುಕ್ತವೆಂದು ಭಾವಿಸಬಹುದಾದಂಥ ಅಂಥ ನೆರವಿನೊಂದಿಗೆ, ಯಾವುದಾದರೂ ಇದ್ದರೆ, ಯಾವುದೇ ಕಚೇರಿಯನ್ನು ಪ್ರವೇಶಿಸಬಹುದು ಅಥವಾ ಯಾವುದೆ ಹಡಗನ್ನು ಹತ್ತಬಹುದು, ಅವುಗಳನ್ನು ಶೋಧಿಸಬಹುದು ಮತ್ತು ಅದರ ಪ್ರಭಾರವನ್ನು ಹೊಂದಿರುವವರೆಂದು ಕಂಡು ಬರುವ ಯಾರೇ ವ್ಯಕ್ತಿಯನ್ನು ನಾವಿಕರ ನಿಯೋಜನೆಯ ಅಥವಾ ನಾವಿಕರಿಗೆ ಸಂದಾಯ ಮಾಡಿದ ಮಜೂರಿಗಳ ಸಂಬಂಧದಲ್ಲಿನ ಯಾವುದೇ ಲೆಕ್ಕಗಳು, ಪುಸ್ತಕಗಳು, ರಿಜಿಸ್ಟರುಗಳು ಮತ್ತು ಇತರ ದಸ್ತಾವೇಜುಗಳನ್ನು ಪರಿಶೀಲನೆಗಾಗಿ ತನ್ನ ಮುಂದೆ ಹಾಜರುಪಡಿಸುವಂತೆ ಅಗತ್ಯಪಡಿಸಬಹುದು;

(ಸಿ) ಮೇಲೆ ಹೇಳಿದ ಯಾವುದೇ ಉದ್ದೇಶಗಳಿಗೆ ಸುಸಂಬದ್ಧವಾದ ಯಾವುದೇ ವಿಷಯದ ಸಂಬಂಧದಲ್ಲಿ, ನಿಯೋಜಕನನ್ನು, ಅವನ ಏಜೆಂಟ್ ನನ್ನು ಅಥವಾ ಸೇವಕನನ್ನು ಅಥವಾ ಕಚೇರಿಯ ಅಥವಾ ಹಡಗಿನ ಪ್ರಭಾರದಲ್ಲಿರುವ ಯಾರೇ ಇತರ ವ್ಯಕ್ತಿ ಅಥವಾ ಕಚೇರಿಯ ಅಥವಾ ಹಡಗಿನಲ್ಲಿ ನೌಕರನಾಗಿದ್ದನೆಂದು ಪರಿಶೀಲಕನು ನಂಬಲು ಯುಕ್ತ ಕಾರಣವಿರುವ ಯಾರೇ ವ್ಯಕ್ತಿಯನ್ನು ಪರಿಶೀಲಿಸಬಹುದು.

(ಡಿ) ನಿಧಿಯ ಸಂಬಂಧದಲ್ಲಿ ನಿರ್ವಹಿಸಿಕೊಂಡು ಬಂದಿರುವ ಯಾವುದೇ ಪುಸ್ತಕ, ರಿಜಿಸ್ಟರು, ಅಥವಾ ಇತರ ದಸ್ತಾವೇಜುಗಳ ಪ್ರತಿಗಳನ್ನು ತಯಾರಿಸಬಹುದು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ತೆಗೆದುಕೊಳ್ಳಬಹುದು ಮತ್ತು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧವನ್ನು ನಿಯೋಜಕನು ಮಾಡಿರುವನೆಂದು ನಂಬಲು ಅವನಿಗೆ ಕಾರಣವಿದ್ದಲ್ಲಿ, ತಾನು ಯುಕ್ತವೆಂದು ಭಾವಿಸಬಹುದಾದಂಥ ನೆರವಿನೊಂದಿಗೆ ಆ ಅಪರಾಧಕ್ಕೆ ಸಂಬಂಧಿಸಿ ಅವನು ಸುಸಂಭದ್ಧವೆಂದು ಪರಿಗಣಿಸಬಹುದಾದಂಥ ಪುಸ್ತಕ, ರಿಜಿಸ್ಟರು ಅಥವಾ ಇತರ ದಸ್ತಾವೇಜು ಅಥವಾ ಅದರ ಭಾಗಗಳನ್ನು ಅಭಿಗ್ರಹಣ ಮಾಡಬಹುದು.

(ಇ) ಪರಿಯೋಜನೆಯು ಉಪಬಂಧಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸಬಹುದು.

(3) ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2)ರ ಉಪಬಂಧಗಳು, ಸಾಧ್ಯವಾದಷ್ಟು ಮಟ್ಟಿಗೆ ಸದರಿ ಸಂಹಿತೆಯ 94ನೇ ಪ್ರಕರಣದ ಮೇರೆಗೆ ಹೊರಡಿಸಿದ ವಾರಂಟಿನ ಅಧಿಕಾರದ ಮೇರೆಗೆ ಮಾಡಲಾದ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೆ ಅನ್ವಯಿಸುವಂತೆಯೇ (2)ನೇ ಉಪಪ್ರಕರಣದ ಮೇರೆಗೆ ಮಾಡಿದ ಯಾವುದೇ ಶೋಧನೆ ಅಥವಾ ಅಭಿಗ್ರಹಣಕ್ಕೂ ಅನ್ವಯಿಸುತ್ತವೆ.

(4) ಪ್ರತಿಯೊಬ್ಬ ಪರಿಶೀಲಕನನ್ನೂ, ಭಾರತ ದಂಡ ಸಂಹಿತೆ, 1860ರ (1860 45)ರ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕ ನೌಕರನೆಂದು ಭಾವಿಸತಕ್ಕದ್ದು.

**16. ದಂಡನೆಗಳು:–** (1) ಈ ಅಧಿನಿಯಮದ ಮೇರೆಗೆ ಅಥವಾ ಪರಿಯೋಜನೆಯ ಮೇರೆಗೆ, ತಾನು ಮಾಡಬೇಕಾದ ಯಾವುದೇ ಸಂದಾಯವನ್ನು ತಪ್ಪಿಸುವ ಅಥವಾ ಅಂಥ ಸಂದಾಯವನ್ನು ತಪ್ಪಿಸುವಂತೆ ಇತರ ಯಾರೇ ವ್ಯಕ್ತಿಗೆ ಶಕ್ತಗೊಳಿಸುವ ಉದ್ದೇಶಕ್ಕಾಗಿ ತಿಳಿದೂ ಯಾವುದೇ ಸುಳ್ಳು ಹೇಳಿಕೆ ಅಥವಾ ಸುಳ್ಳು ನಿರೂಪಣೆಯನ್ನು ಮಾಡುವ ಅಥವಾ ಮಾಡುವುದಕ್ಕೆ ಕಾರಣವಾಗುವ ಯಾವ ವ್ಯಕ್ತಿಯೇ ಆಗಲಿ, ಒಂದು ವರ್ಷದವರೆಗೂ ವಿಸ್ತರಿಸಬಹುದಾದ ಅವಧಿಯ ಕಾರವಾಸದಿಂದ ಅಥವಾ ಐವತ್ತು ಸಾವಿರ ರೂಪಾಯಿಗಳವರೆಗೂ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಪರಿಯೋಜನೆಯು, ಅದರ ಯಾವುದೇ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು ಆರು ತಿಂಗಳವರೆಗೆ ವಿಸ್ತರಿಸಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕುದೆಂದು ಉಪಬಂಧಿಸಬಹುದು.

(3) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಅಥವಾ ಪಾಲಿಸಲು ತಪ್ಪುವ ಯಾರೇ ವ್ಯಕ್ತಿಯು, ಅಂಥ ಉಲ್ಲಂಘನೆ ಅಥವಾ ಅವನು ಪಾಲನೆಯ ಬಗ್ಗೆ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಬೇರೆಲ್ಲಿಯೂ ಇತರ ಯಾವುದೇ ದಂಡನೆಯನ್ನು

ಉಪಬಂಧಿಸಿಲ್ಲದಿದ್ದರೆ, ಮೂರು ತಿಂಗಳುವರೆಗೆ ವಿಸ್ತರಿಸಬಹುದಾದ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(4) ಯಾವುದೇ ನ್ಯಾಯಾಲಯವು, ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಪ್ರಾಧಿಕಾರಿಯ ಪೂರ್ವ ಮಂಜೂರಾತಿಯೊಂದಿಗೆ ನಾವಿಕರ ಭವಿಷ್ಯ ನಿಧಿ ಕಮಿಷನರನು ಅಥವಾ 15ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ನಿಯಮಿಸಲಾದ ಪರಿಶೀಲಕನು, ಅಪರಾಧವನ್ನು ಘಟಿಸುವ ಸಂಗತಿಗಳ ಬಗ್ಗೆ ಮಾಡಿದ ಲಿಖಿತ ವರದಿಯ ಮೇಲಲ್ಲದೇ ಈ ಅಧಿನಿಯಮದ ಮೇರೆಗೆ ಅಥವಾ ಪರಿಯೋಜನೆಯ ಮೇರೆಗೆ ದಂಡನೀಯವಾದ ಯಾವುದೇ ಅಂಥ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕುದಲ್ಲ.

**17. ಕಂಪನಿಗಳಿಂದ ಅಪರಾಧಗಳು:–** (1) ಈ ಅಧಿನಿಯಮದ ಅಥವಾ ಪರಿಯೋಜನೆಯ ಮೇರೆಗೆ ಅಪರಾಧವನ್ನು ಮಾಡುವ ವ್ಯಕ್ತಿಯು ಕಂಪನಿಯಾಗಿದ್ದರೆ, ಅಪರಾಧವನ್ನು ಮಾಡಿದ ಕಾಲದಲ್ಲಿ ಕಂಪನಿಯ ಪ್ರಭಾರವನ್ನು ಹೊಂದಿದ್ದ ಮತ್ತು ಕಂಪನಿಯ ವ್ಯವಹಾರ ನಿರ್ವಹಣೆಯ ಬಗ್ಗೆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನೂ ಹಾಗೂ ಕಂಪನಿಯನ್ನೂ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ಅವರು ವ್ಯವಹರಣೆಗೆ ಗುರಿಯಾಗಲು ಹೊಣೆಯಾಗಿರತಕ್ಕದ್ದು ಹಾಗೂ ತದನುಸಾರವಾಗಿ ದಂಡಿತವಾಗತಕ್ಕದ್ದು:

ಪರಂತು, ಈ ಉಪಪ್ರಕರಣದಲ್ಲಿ ಅಡಕವಾಗಿರುವುದಾವುದೂ, ತನ್ನ ತಿಳಿವಳಿಕೆಗೆ ಬಾರದೆ ಅಪರಾಧವು ಮಾಡಲಾಯಿತೆಂದು ಅಥವಾ ಅಂಥ ಅಪರಾಧ ಮಾಡುವುದನ್ನು ಪ್ರತಿಬಂಧಿಸಲು ಯುಕ್ತ ಶ್ರದ್ಧೆಯನ್ನು ವಹಿಸಿದ್ದನೆಂದು ಅವನು ರುಜುವಾತುಪಡಿಸಿದರೆ, ಅಂಥ ಯಾರೇ ವ್ಯಕ್ತಿಯನ್ನು ಯಾವುದೇ ದಂಡನೆಗೆ ಹೊಣೆ ಮಾಡತಕ್ಕುದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ ಈ ಅಧಿನಿಯಮದ ಅಥವಾ ಪರಿಯೋಜನೆಯು ಮೇರೆಗೆ ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ ಮತ್ತು ಕಂಪನಿಯ ಯಾರೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಅಥವಾ ಯಾವುದೇ ಉಪೇಕ್ಷೆಯಿಂದ ಸಂಭವಿಸಿತೆಂದು ಹೇಳಬಹುದೆಂದು

ರುಜುವಾತಾದರೆ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ವ್ಯವಹರಣೆಗೆ ಗುರಿಯಾಗಲು ಹೊಣೆಯಾಗತಕ್ಕದ್ದು ಹಾಗೂ ತದನುಸಾರವಾಗಿ ದಂಡಿತರಾಗತಕ್ಕದ್ದು.

(3) ಭಾರತದಲ್ಲಿ ನೋಂದಾಯಿತವಾಗಿರದ ಕಂಪನಿಯು ಈ ಅಧಿನಿಯಮದ ಅಥವಾ ಪರಿಯೋಜನೆಯ ಮೇರೆಗೆ ಯಾವುದೇ ಅಪರಾಧವನ್ನು ಮಾಡಿರುವಲ್ಲಿ ಮತ್ತು ಅಂಥ ಕಂಪನಿಯು ಭಾರತದಲ್ಲಿ ಏಜೆಂಟನ್ನು ಹೊಂದಿದ್ದು ಅಂಥ ಏಜೆಂಟನೂ ಸಹ ಕಂಪನಿಯಾಗಿದ್ದರೆ, ಈಗ ಈ ಪ್ರಕರಣದ ಉಪಬಂಧಗಳು, ಆ ಏಜೆಂಟನು ಅಪರಾಧವನ್ನು ಮಾಡಿದ್ದರೆ ಹೇಗೋ ಹಾಗೆ ಅಂಥ ಏಜೆಂಟನಿಗೂ ಅನ್ವಯಿಸತಕ್ಕದ್ದು.

**ವಿವರಣೆ:**– ಈ ಪ್ರಕರಣದ ಉದ್ದೇಶಗಳಿಗಾಗಿ.–

(ಎ) "ಕಂಪನಿ" ಎಂದರೆ ಯಾವುದೇ ನಿಗಮಿತ ನಿಕಾಯ ಮತ್ತು ಫರ್ಮು ಮತ್ತು ವ್ಯಕ್ತಿಗಳ ಇತರ ಸಂಘವನ್ನೂ ಒಳಗೊಳ್ಳುತ್ತದೆ; ಮತ್ತು

(ಬಿ) ಫರ್ಮಿನ ಸಂಬಂಧದಲ್ಲಿ "ನಿರ್ದೇಶಕ" ಎಂದರೆ ಫರ್ಮಿನ ಪಾಲುದಾರ.

**18. ಹಾನಿ ಪರಿಹಾರವನ್ನು ವಸೂಲು ಮಾಡಲು ಅಧಿಕಾರ:**– ಯಾರೇ ನಿಯೋಜಕನು ನಿಧಿಗೆ ಯಾವುದೇ ವಂತಿಗೆಯನ್ನು ಸಂದಾಯ ಮಾಡುವಲ್ಲಿ ಅಥವಾ ಈ ಅಧಿನಿಯಮ ಅಥವಾ ಪರಿಯೋಜನೆಯ ಇತರ ಯಾವುದೇ ಉಪಬಂಧ ಮೇರೆಗೆ ಸಂದಾಯವಾಗಬೇಕಾಗಿರುವ ಯಾವುದೇ ಚಾರ್ಜುಗಳನ್ನು ಸಂದಾಯ ಮಾಡಲು ತಪ್ಪಿದರೆ, ಸರ್ಕಾರವು ತಾನು ಯುಕ್ತವೆಂದು ಭಾವಿಸಬಹುದಾದಂಥ ಬಾಕಿಯಿರುವ ಮೊಬಲಗಿನ ಶೇಕಡಾ ಇಪ್ಪತ್ತೈದಕ್ಕೆ ಮೀರದಂಥ ಹಾನಿ ಪರಿಹಾರವನ್ನು ನಿಯೋಜಕನಿಂದ ವಸೂಲು ಮಾಡಬಹುದು.

**19. ಖಾತೆಯ ವರ್ಗಾವಣೆ:**– ಯಾರೇ ನಾವಿಕನು, ನಾವಿಕ ವೃತ್ತಿಯನ್ನು ಆ ವೃತ್ತಿಯನ್ನು ಪುನರಾರಂಭಿಸುವ ಸಧ್ಯದ ಉದ್ದೇಶವಿಲ್ಲದೆ ಬಿಟ್ಟರೆ ಮತ್ತು ನೌಕರರ ಭವಿಷ್ಯ ನಿಧಿ ಅಧಿನಿಯಮ 1952 (1952ರ 19)ವು ಅನ್ವಯವಾಗುವ ಯಾವುದೇ ಕಾರ್ಯ ಸಂಸ್ಥೆಯಲ್ಲಿ ಉದ್ಯೋಗವನ್ನು ಪಡೆದರೆ, ನಾವಿಕನು ಹಾಗೇ ಇಚ್ಛಿಸಿದರೆ ಮತ್ತು ಅಂಥ ಭವಿಷ್ಯ ನಿಧಿಗೆ ಸಂಬಂಧಪಟ್ಟ ನಿಯಮಗಳು ಅಂಥ

ವರ್ಗಾವಣೆಗೆ ಅವಕಾಶ ಕೊಟ್ಟರೆ ಅಂಥ ನಾವಿಕನ ಲೆಕ್ಕದಲ್ಲಿ ನಿಧಿಯಲ್ಲಿ ಜಮೆಯಲ್ಲಿರುವ ಮೊಬಲಗನ್ನು ಆ ಕಾರ್ಯ ಸಂಸ್ಥೆಯ ಭವಿಷ್ಯ ನಿಧಿಯಲ್ಲಿನ ಅವನ ಖಾತೆಯ ಜಮೆಗೆ ಮಂಡಳಿಯು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ವರ್ಗಾಯಿಸತಕ್ಕದ್ದು.

**20. ವಿನಾಯಿತಿ ನೀಡಲು ಅಧಿಕಾರ:–** (1) ಮಂಡಲಿಯು, ಲಿಖಿತ ಆದೇಶದ ಮೂಲಕ ಈ ಅಧಿನಿಯಮವು ಯಾರಿಗೆ ಅನ್ವಯವಾಗುವುದೋ ಆ ಯಾರೇ ನಾವಿಕನನ್ನು ಮತ್ತು ಅವನ ನಿಯೋಜಕನನ್ನು ಈ ಅಧಿನಿಯಮದ ಎಲ್ಲಾ ಅಥವಾ ಯಾವುದೇ ಉಪಬಂಧಗಳ ಪ್ರವರ್ತನೆಯಿಂದ, ನಾವಿಕನ ಭವಿಷ್ಯ ನಿಧಿಯ ಅಥವಾ ಪಿಂಚಣಿಯ ಸ್ವರೂಪದಲ್ಲಿನ ಪ್ರಯೋಜನೆಗಳ ಉಪಭೋಗದಲ್ಲಿದ್ದಾನೆಂದು ಮತ್ತು ಅಂಥ ಪ್ರಯೋಜನೆಗಳು ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಒದಗಿಸಲಾದ ಪ್ರಯೋಜನೆಗಳಿಗಿಂತ ಪ್ರತ್ಯೇಕವಾಗಿ ಅಥವಾ ಜಂಟಿಯಾಗಿ ಒಟ್ಟಿನಲ್ಲಿ ನಾವಿಕನಿಗೆ ಕಡಿಮೆ ಅನುಕೂಲಕರವಾಗಿಲ್ಲವೆಂದು ಮಂಡಳಿಯು ಅಭಿಪ್ರಾಯಪಟ್ಟರೆ ವಿನಾಯಿತಿಗೊಳಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ವಿನಾಯಿತಿಯನ್ನು ಕೊಟ್ಟಿರುವಲ್ಲಿ, ನಿಯೋಜಕನು, ವಿನಾಯಿತಿಯನ್ನು ಕೊಟ್ಟ ನಂತರದ ಯಾವುದೇ ಕಾಲದಲ್ಲಿ ಮಂಡಳಿಯ ಅನುಮತಿಯಿಲ್ಲದೇ ಅಂಥ ವಿನಾಯಿತಿಯನ್ನು ಕೊಟ್ಟ ಕಾಲದಲ್ಲಿ ಯಾವ ಭವಿಷ್ಯನಿಧಿ, ಪಿಂಚಣಿ ಅಥವಾ ಉಪದಾನದ ಸ್ವರೂಪದಲ್ಲಿ ಪ್ರಯೋಜನೆಗಳಿಗೆ ಆ ನಾವಿಕನು ಹಕ್ಕುಳ್ಳವನಾಗಿದ್ದನೋ ಅವುಗಳ ಒಟ್ಟು ಪರಿಣಾಮವನ್ನು ಕಡಿಮೆ ಮಾಡತಕ್ಕುದಲ್ಲ.

(3) ನಿಯೋಜನಕನು (2)ನೇ ಉಪಪ್ರಕರಣದ ಅಗತ್ಯತೆಗಳನ್ನು ಪಾಲಿಸಲು ತಪ್ಪಿದರೆ, ಮಂಡಲಿಯು, ಲಿಖಿತ ಆದೇಶದ ಮೂಲಕ ಈ ಪ್ರಕರಣದ ಮೇರೆಗೆ ಕೊಟ್ಟ ವಿನಾಯಿತಿಯನ್ನು ರದ್ದುಗೊಳಿಸಬಹುದು.

ಪರಂತು, ಉದ್ದೇಶಿತ ರದ್ದಿಯಾತಿಯ ವಿರುದ್ಧ ಕಾರಣವನ್ನು ತೋರಿಸಲು ನಿಯೋಜಕನಿಗೆ ಯುಕ್ತ ಅವಕಾಶವನ್ನು ಕೊಟ್ಟ ಹೊರತು, ಅಂಥ ಯಾವುದೇ ಆದೇಶವನ್ನು ಮಾಡತಕ್ಕುದಲ್ಲ.

**21. ಸದ್ಭಾವನೆಯಿಂದ ಕೈಗೊಂಡ ಕಾರ್ಯಗಳ ಸಂರಕ್ಷಣೆ:–** ಈ ಅಧಿನಿಯಮದ ಮೇರೆಗೆ ಅಥವಾ ಪರಿಯೋಜನೆಯ ಮೇರೆಗೆ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿತ ಯಾವುದೇ

ವಿಷಯದ ಬಗ್ಗೆ, ಸರ್ಕಾರದ ಅಥವಾ ಮಂಡಲಿಯ ಅಥವಾ ಅದರ ಯಾವುದೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆಯನ್ನು ಅಥವಾ ಇತರ ಕಾನೂನು ವ್ಯವಹಾರವನ್ನು ಹೂಡತಕ್ಕುದಲ್ಲ.

**22. ಪ್ರತ್ಯಾಯೋಜನೆ:–** (1) ಸರ್ಕಾರವು ಆದೇಶದ ಮೂಲಕ, ಈ ಅಧಿನಿಯಮದ ಅಥವಾ ಪರಿಯೋಜನೆಯ ಮೂಲಕ ಸರ್ಕಾರಕ್ಕೆ ಪ್ರದತ್ತವಾದ ಅಥವಾ ಅದಕ್ಕೆ ವಿಧಿಸಲಾದ ಯಾವುದೇ ಅಧಿಕಾರವನ್ನು ಅಥವಾ ಕರ್ತವ್ಯವನ್ನು (3ನೇ ಪ್ರಕರಣದ ಮೇರೆಗೆ ಪರಿಯೋಜನೆಯನ್ನು ರೂಪಿಸುವ ಅಧಿಕಾರವನ್ನು ಹೊರತುಪಡಿಸಿ) ನಿರ್ದೇಶನದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸನ್ನಿವೇಶಗಳಲ್ಲಿ ಮತ್ತು ಅಂಥ ಷರತ್ತುಗಳ ಮೇರೆಗೆ, ಯಾವುದಾದರೂ ಇದ್ದರೆ, ಹಾಗೆ ನಿರ್ದಿಷ್ಟಪಡಿಸಬಹುದಾದ ಅಧಿಕಾರಿ ಅಥವಾ ಪ್ರಾಧಿಕಾರಿಯು ಚಲಾಯಿಸತಕ್ಕದ್ದು ಅಥವಾ ನಿರ್ವಹಿಸತಕ್ಕುದೆಂದು ನಿರ್ದೇಶಿಸಬಹುದು.

(2) ಮಂಡಲಿಯು, ಸರ್ಕಾರದ ಪೂರ್ವಾನುಮೋದನೆಯೊಂದಿಗೆ ಅದು ನಿರ್ದಿಷ್ಟಸಬಹುದಾದಂಥ ಷರತ್ತುಗಳು ಮತ್ತು ಪರಿಮಿತಿಗಳು ಯಾವುದಾದರೂ ಇದ್ದರೆ, ಅವುಗಳಿಗೊಳಪಟ್ಟ ಪರಿಯೋಜನೆಯ ದಕ್ಷ ನಿರ್ವಹಣೆಗಾಗಿ ತಾನು ಅವಶ್ಯವೆಂದು ಭಾವಿಸಬಹುದಾದಂತೆ ಈ ಅಧಿನಿಯಮದ ಮೇರೆಗಿನ ತನ್ನ ಪ್ರಕಾರ್ಯಗಳನ್ನು ಮಂಡಲಿಯ ಅಧ್ಯಕ್ಷನಿಗೆ ಅಥವಾ ಅದರ ಯಾರೇ ನೌಕರುಗಳಿಗೆ ಪ್ರತ್ಯಾಯೋಜಿಸಬಹುದು.

**23. ತೊಂದರೆಗಳನ್ನು ನಿವಾರಿಸುವ ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ಸರ್ಕಾರವು, ತೊಂದರೆಗಳನ್ನು ನಿವಾರಿಸಲು ತನಗೆ ಅವಶ್ಯವೆಂದು ಅಥವಾ ವಿಹಿತವೆಂದು ಕಂಡುಬರುವಂತೆ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿರದ ಯಾವುದೇ ಅಂಥ ಆದೇಶವನ್ನು ಮಾಡಬಹುದು ಅಥವಾ ಅಂಥ ನಿರ್ದೇಶನವನ್ನು ಕೊಡಬಹುದು ಮತ್ತು ಯಾವುದೇ ಅಂಥ ಆದೇಶವು ಅಂತಿಮವಾಗಿರತಕ್ಕದ್ದು.

**24. ಪರಿಯೋಜನೆಯನ್ನು ಸಂಸತ್ತಿನ ಸದನಗಳ ಮುಂದೆ ಇಡತಕ್ಕದ್ದು:–** ಈ ಅಧಿನಿಯಮದ ಮೇರೆಗೆ ರೂಪಿಸಲಾದ ಯಾವುದೇ ಪರಿಯೋಜನೆಯನ್ನು ಅದನ್ನು ರೂಪಿಸಿದ ತರುವಾಯ, ಆದಷ್ಟು ಬೇಗನೆ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದು ಬರುವ ಎರಡು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನ ಅಥವಾ ಅದಕ್ಕೆ

ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಪರಿಯೋಜನೆಯ ಯಾವುದೇ ಉಪಬಂಧದಲ್ಲಿ ಯಾವುದೇ ಉಪಬಂಧವನ್ನು ಮಾಡಬೇಕೆಂದು ಎರಡು ಸದನಗಳು ಒಪ್ಪಿದರೆ ಅಥವಾ ಆ ಪರಿಯೋಜನೆಯಲ್ಲಿ ಯಾವುದೇ ಮಾರ್ಪಾಟನ್ನು ಮಾಡಕೊಡದೆಂದು ಎರಡು ಸದನಗಳು ಒಪ್ಪಿದರೆ ಆ ತರುವಾಯ ಪರಿಯೋಜನೆಯ ಆ ಉಪಬಂಧವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದು ಅಥವಾ ಪರಿಣಾಮಕಾರಿಯಾಗಿರತಕ್ಕುದಲ್ಲ, ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ಉಪಬಂಧದ ಮೇರೆಗೆ ಹಿಂದೆ ಮಾಡಿದ ಯಾವುದೆ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದಲ್ಲ.

## ಅನುಸೂಚಿ

**[3(2)ನೇ ಪ್ರಕರಣವನ್ನು ನೋಡಿ]**

**ಪರಿಯೋಜನೆಯಲ್ಲಿ ಯಾವ ವಿಷಯಗಳ ಬಗ್ಗೆ ಉಪಬಂಧವನ್ನು ಮಾಡಬಹುದೋ ಆ ವಿಷಯಗಳು:–**

1. ನಿಧಿಗೆ ಸೇರತಕ್ಕ ನಾವಿಕರು.
2. ನಿಯೋಜಕರು ಮತ್ತು ನಾವಿಕರು ಅಥವಾ ನಾವಿಕರ ಪರವಾಗಿ ನಿಧಿಗೆ ವಂತಿಗೆಗಳನ್ನು ಸಂದಾಯ ಮಾಡುವ ಕಾಲ ಮತ್ತು ರೀತಿ.
3. ನಿಯೋಜಕನು, ನಿಧಿಯ ಆಡಳಿತ ವೆಚ್ಚವನ್ನು ಪೂರೈಸಲು ಅವಶ್ಯಕವಾಗಬಹುದಾದಂಥ ಹಣದ ಮೊತ್ತಗಳನ್ನು ಸಂದಾಯದ ಮತ್ತು ಸಂದಾಯವನ್ನು ಮಾಡತಕ್ಕ ದರ ಮತ್ತು ರೀತಿ.
4. ಮಂಡಲಿಯ ಇತರ ಪ್ರಕಾರ್ಯಗಳು.
5. ಮಂಡಲಿಯ ನೆರವಿಗಾಗಿ ಯಾವುದೇ ಸಮಿತಿಯ ರಚನೆ.
6. ಮಂಡಲಿಯ ಪ್ರಾದೇಶಿಕ ಮತ್ತು ಇತರ ಕಚೇರಿಗಳನ್ನು ತೆರೆಯುವುದು.
7. ಲೆಕ್ಕಪತ್ರಗಳನ್ನು ಇಡತಕ್ಕ ರೀತಿ, ಸರ್ಕಾರವು ಹೊರಡಿಸಿದ ನಿರ್ದೇಶನಗಳು ಮತ್ತು ನಿರ್ದಿಷ್ಟಪಡಿಸಲಾದ ಷರತ್ತುಗಳಿಗುನಸಾರವಾಗಿ ನಿಧಿಗೆ ಸೇರಿದ ಹಣವನ್ನು ತೊಡಗಿಸುವಿಕೆ, ಬಜೆಟ್ ತಯಾರಿಕೆ, ಲೆಕ್ಕಪತ್ರಗಳ ಪರಿಶೋಧನೆ ಮತ್ತು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

8. ಯಾವ ಷರತ್ತುಗಳ ಮೇರೆಗೆ ನಿಧಿಯಿಂದ ಹಿಂತೆಗೆದುಕೊಳ್ಳುವುದನ್ನು ಅನುಮತಿಸಬಹುದು ಮತ್ತು ಯಾವುವೇ ಕಳೆತಗಳನ್ನು ಮಾಡಬಹುದು ಅಥವಾ ಮುಟ್ಟುಗೋಲನ್ನು ಹಾಕಿಕೊಳ್ಳಬಹುದು ಮತ್ತು ಅಂಥ ಕಳೆತ ಅಥವಾ ಮುಟ್ಟುಗೋಲಿನ ಗರಿಷ್ಠ ಮೊಬಲಗು.

9. ಸರ್ಕಾರವು ಮಂಡಲಿಯೊಂದಿಗೆ ಸಮಾಲೋಚಿಸಿ ಸದಸ್ಯರಿಗೆ ಸಂದಾಯವಾಗಬೇಕಾದ ಬಡ್ಡಿಯ ದರವನ್ನು ನಿಗದಿಮಾಡುವುದು.

10. ಅಗತ್ಯಪಡಿಸಿದಾಗಲೆಲ್ಲ ನಾವಿಕನು ತನ್ನ ಮತ್ತು ತನ್ನ ಕುಟುಂಬದ ಬಗ್ಗೆ ವಿವರಗಳನ್ನು ಒದಗಿಸತಕ್ಕ ನಮೂನೆ.

11. ಸದಸ್ಯನು ತನ್ನ ಮರಣದ ತರುವಾಯ ತನ್ನ ಜಮೆಯಲ್ಲಿರುವ ಮೊಬಲಗನ್ನು ಸ್ವೀಕರಿಸಲು ವ್ಯಕ್ತಿಯ ನಾಮನಿರ್ದೇಶನ ಮತ್ತು ಅಂಥ ನಾಮನಿರ್ದೇಶನದ ರದ್ದಿಯಾತಿ ಅಥವಾ ಬದಲಾವಣೆ.

12. ನಾವಿಕರಿಗೆ ಸಂಬಂದಿಸಿದಂತೆ ಇಡಬೇಕಾದ ರಿಜಿಸ್ಟರುಗಳು ಮತ್ತು ದಾಖಲೆಗಳು ಹಾಗೂ ನಿಯೋಜಕನು ಸಲ್ಲಿಸಬೇಕಾದ ವರದಿಗಳು.

13. ಈ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಉದ್ದೇಶಗಳಿಗಾಗಿ ವಿಧಿಸಬೇಕಾದ ಫೀಜು.

14. 16ನೇ ಪ್ರಕರಣದ ಮೇರೆಗೆ ದಂಡನೀಯವಾಗತಕ್ಕ ಉಲ್ಲಂಘನೆಗಳು ಅಥವಾ ತಪ್ಪಿತಗಳು.

15. ಪರಿಶೀಲಕರು ಚಲಾಯಿಸಬಹುದಾದ ಮತ್ತಷ್ಟು ಅಧಿಕಾರಗಳು, ಯಾವುದಾದರೂ ಇದ್ದರೆ.

16. ಯಾವ ಷರತ್ತುಗಳ ಮೇರೆಗೆ ಸದಸ್ಯನು, ನಿಧಿಯಿಂದ ಜೀವವಿಮೆಯ ಕಂತುಗಳನ್ನು ಸಂದಾಯ ಮಾಡಲು ಅನುಮತಿಸಬಹುದು.

17. ಪರಿಯೋಜನೆಯಲ್ಲಿ ಉಪಬಂಧಿಸಬೇಕಾದ ಅಥವಾ ಪರಿಯೋಜನೆಯನ್ನು ಕಾರ್ಯಗತಗೊಳಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದ ಅಥವಾ ಯುಕ್ತವಾಗಬಹುದಾದ ಯಾವುದೇ ಇತರ ವಿಷಯ.